ಶ್ರೀ ಎಸ್. ಆರ್. ಕಂಠಿ.—ಸರಕಾರದ ಕಂಡೀಷನ್ನಿಗೆ ಅವರು ಒಪ್ಪಿಕೊಂಡಿದ್ದಾರೆ. ಅವರಿಗೆ ಕಷ್ಟವಾಗುತ್ತದೆಂದು ಕೊಡುವ ಮುನ್ನವೇ ಹೇಳಿದ್ದೇವೆ : ಕಷ್ಟವಾಗುತ್ತದೆ, ವಿಚಾರಮಾಡಿ ಎಂದು ಹೇಳಿದಾಗ, ಕೊಡಿ ಸ್ವಾಮಿ, ಎಂದು ಹೇಳಿದರು. ಕೊಡುವುದಕ್ಕೆ ದುಡ್ಡು ಎಲ್ಲಿದೆ ?

ಶ್ರೀ ಎಸ್. ಎಂ. ಕೃಷ್ಣ.—ರಾಜಭವನಕ್ಕೆ ದುಡ್ಡು ಇದೆಯೋ ?

ಶ್ರೀ ಎಸ್. ಆರ್. ಕಂಠಿ.—ರಾಜಭವನವೂ ಬೇಕು, ಸ್ಕೂಲುಗಳೂ ಬೇಕು, ಎರಡನ್ನೂ ಇಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ. ಈ ತರಹ ಟಾಂಟ್‌ಮಾಡುವುದು ಸರಿಯಲ್ಲ.

ಶ್ರಿ. ಎಚ್. ಆರ್. ಕೇಶವಮೂರ್ತಿ.—ಪ್ರಾರಂಭಮಾಡಿದ್ದಾರೆ. ಹಣವಿಲ್ಲದೆ 41 ಸ್ಕೂಲು ಗಳು ಹಾಗೆಯೇ ಸಾಯುತ್ತಾ ಇವೆ.

Sri S. R. KANTHI.—Sir, he has got the permission to open the school. Let him bring it to me and I will abide by the condition stated therein.

Mr. SPEAKER.—Question Hour is over. Now, Short Notice Question by Sri S. M. Krishna.

1-30 P.M.

SHORT NOTICE QUESTION

Breaching of the canal Leading water from Linganamakki dam to Anegondi Power Stateion.

Q.—33. Sri S. M. KRISHNA (Maddur).—

Will the Government be pleased to state :—

(*a*) whether the canal, leading water from Linganamakki Dam to Anegundi Power Station breached recently ;

(*b*) if so, the reasons for the said breach ;

(*c*) whether it is due to ineffective supervision and unfulfilled specifications ?

A.—Sri VEERENDRA PATIL (Minister for Public Works).—

(*a*) A longitudinal crack has been noticed in the bottom slab of the channel.

(*b*) Investigations so far made indicate that the probable cause of the damage may be due to unforeseen upward force exerted from the sub-soil region.

(*c*) No.

ಶ್ರೀ ಎಸ್. ಎಂ. ಕೃಷ್ಣ.—ನಾಲೆಯ ತಳಪಾಯದ ಸಿಮೆಂಟ್ ಕಾಂಕ್ರೀಟ್ ಭಾಗದಲ್ಲಿ ಬಿರುಕುಂಟಾಗಿರುವುದನ್ನು ಸರಿಮಾಡಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಈ ಡ್ಯಾಮೆಜ್ ಆಗಿರುವುದು ಕಂಡು ಬಂದದ್ದು 17ನೇ ಜೂನ್ 1964 ರಲ್ಲಿ. ಬಹುಶಃ ರಿಪೇರಿ ಮಾಡುವುದಕ್ಕೆ 1½ ಲಕ್ಷ ರೂಪಾಯಿ ಖರ್ಚಾಗಬಹುದೆಂದು ಅಂದಾಜು ಆಗಿದೆ.

ಶ್ರೀ ಎಸ್. ಎಂ. ಕೃಷ್ಣ.—ಈ ನಾಲೆ ಬಿರುಕು ಬಿಟ್ಟಿರತಕ್ಕಂಥಾದ್ದನ್ನು ಗಮನಿಸಿದರೆ, ಇದರಿಂದ ಉತ್ತರೋತ್ತರ ಲಂಗನಮಕ್ಕೆ ಅಣೆಕಟ್ಟಿಗೂ ಅಪಾಯ ಕಟ್ಟಿಟ್ಟು ಅನ್ನುವುದನ್ನು ಸರಕಾರ ಒಪ್ಪುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಇಲ್ಲ, ಸರಕಾರ ಒಪ್ಪುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಗಿದ್ದ ಕಂಟ್ರಾಕ್ಟರು, ಹಾಗು ಅಧಿಕಾರಿಯಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಡ್ಯಾಮೇಜ್ ಆಗಿದ್ದರಲ್ಲಿ ಅಧಿಕಾರಿಗಳದೂ ತಪ್ಪಲ್ಲ, ಕಂಟ್ರಾಕ್ಟರದೂ ತಪ್ಪಲ್ಲ. ಡ್ಯಾಮೇಜ್ ಏಕೆ ಆಗಿದೆ ಅನ್ನುವುದನ್ನು ಉತ್ತರದಲ್ಲಿ ಹೇಳಿದ್ದೇನೆ ಚಾನಲನ್ನು ನಮ್ಮ ಸ್ಪೆಸಿಫಿಕೇಶನ್ ಪ್ರಕಾರ, ನಮ್ಮ ಡಿಸೈನ್ ಪ್ರಕಾರ ಕಂಟ್ರಾಕ್ಟರು ಕಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಸೂಪರ್‌ವಿಷನ್ ಮಾಡಿದ್ದಾರೆ. ಅದರಮೇಲೆ ಕ್ರಮತೆಗೆದುಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ.

Sri G. V. GOWDA —Before the canal was constructed, did not the investigation disclose that the upward force was likely to be exerted from sub-soil region ?

Sri VEERENDRA PATIL.—Sir, whatever possible precautionary measures were to be taken were taken into consideration while constructing it. The bottom slab is 8 inches in thickness. This is due to unforeseen circumstances.

Sri G. V. GOWDA.—If the upward force that was likely to be exerted had been taken into consideration, probably its thickness would have been more. Does it not amount to faulty investigation ?

Sri VEERENDRA PATIL.—All precautionary measures have been taken. After investigation, the design has been prepared, plan has been prepared and they have been accepted by the Technical Sub-committee and afterwards, the Chief Engineer has constructed it.

ಶ್ರೀ ಎಚ್. ಡಿ. ದೇವೇಗೌಡ.—ಈ ಕೆಲಸ ಯಾವಕಾರಣದಿಂದ ಡ್ಯಾಮೇಜ್ ಆಗಿದೆ ಎಂದು ಕೇಳಿದ್ದಕ್ಕೆ, ನೆಲದ ಕೆಳಭಾಗದಿಂದ ಮೆಲ್ಲಡೆಗೆ ಹೊರಟಿರತಕ್ಕ ಅನಿರೀಕ್ಷಿತ ಒತ್ತಡವು ಈ ಹಾನಿಗೆ ಕಾರಣವಾಗಿದೆ ಎಂದು ಹೇಳಿದ್ದಾರೆ ಇದನ್ನು ಇನ್‌ವೆಸ್ಟಿಗೇಟ್ ಮಾಡಿ ರಿಪೋರ್ಟ್ ಒದಗಿಸಿರುವವರು ನಿಮ್ಮ ಸ್ಪೆಷರ್ ಇಂಜನಿಯರೇ, ಅಥವಾ ಇನ್ಯಾರಾದರೂ ಬೇರೆ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ವಿಚಾರ ಮಾಡಿಸಿದ್ದೀರೋ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಶರಾವತಿ ಸ್ಪೆಷಲ್ ಚೀಫ್, ಇಂಜನಿಯರು ವರದಿಯನ್ನು ಕೊಟ್ಟರು ; ಅದರಮೇಲೆ ಆ ಇನ್‌ಫರ್ಮೇಷನ್ ಈಸಭೆಗೆ ಒದಗಿಸಿದ್ದೇವೆ.

ಶ್ರೀ ಎಸ್. ಗೋಪಾಲ ಗೌಡ.—ಈ ಕೆಲಸವನ್ನು ಮಾಡಿದ ಕಂಟ್ರಾಕ್ಟರು ಯಾರು, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಪ್ರತ್ಯೇಕ ಪ್ರಶ್ನೆಯನ್ನು ಹಾಕಿದರೆ, ಕಂಟ್ರಾಕ್ಟರು ಯಾರು ಎಂಬುದನ್ನು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಚೀಫ್ ಇಂಜನಿಯರವರು ಮಾಡಿದ ತನಿಖೆಯ ಆಧಾರದಮೇಲೆ ಈ ಉತ್ತರಗಳನ್ನು ಒದಗಿಸಿದೆ ಎಂದು ಹೇಳಿವಿರಿ. ಕ್ಯಾಕು ಬಂಬಿರತಕ್ಕಂಥ ಕಾರಣ ಮತ್ತು ಇನ್ನಿತರ ವಿಚಾರಗಳನ್ನು ತನಿಖೆಮಾಡುವುದಕ್ಕೆ ಸೆಂಟ್ರಲ್ ವಾಟರ್ ಮತ್ತು ಪವರ್ ಕಮಿಷನ್ನಿನ ಯಾರಾದರೂ ಅಧಿಕಾರಿಗಳನ್ನು ಬರಮಾಡಿಕೊಂಡು ತನಿಖೆ ಮಾಡಿಸುವ ವಿಚಾರವನ್ನು ಸರಕಾರ ಪರಿಶೀಲಿಸುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಸ್ಪೆಷರ್ ಇಂಜನಿಯರು ಕೊಟ್ಟಂಥ ವರದಿಯನ್ನು ಟೆಕ್ನಿಕಲ್ ಸಬ್-ಕಮಿಟಿ ಮುಂದೆ ಇಡಲಾಗಿದೆ. ಟೆಕ್ನಿಕರ್ ಸಬ್-ಕಮಿಟಿಯವರು ಕೂಡ ಬೇಗ ವಿಚಾರಮಾಡಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿ ಸರಕಾರಕ್ಕೆ ಅಡ್‌ವೈಸ್ ಮಾಡುತ್ತಾರೆ. ಇದೇ ರೀತಿಯಿಂದ ಒಂದು ಬ್ರೀಚ್ ಹೋದಸಲ ಜೂಲೈ 1963 ರಲ್ಲಿ ಆಗಿತ್ತು ಆ ಬ್ರೀಚ್ ಆದನಂತರ ಯಾವರೀತಿಯಿಂದ ರಿಪೇರಿ ಮಾಡಬೇಕು ಎಂದು ಪರಿಶೀಲನುವ ನಲುವಾಗಿ ಡಾ|| ಕೆ. ಎಲ್. ರಾವ್ ಅವರು ಬಂದಿದ್ದರು. ಅವರು ಕೆಲವು ಗೈಡೆನ್ಸ್ ಕೊಟ್ಟರು. ಆದರ ಪ್ರಕಾರ ರಿಪೇರಿ ಮಾಡಿದ್ದಾರೆ. ಬಹುಶಃ ಅದೇರೀತಿಯಿಂದ ತಕ್ಕ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳಬಹುದು ಎಂದು ನನಗೆ ಅನ್ನಿಸುತ್ತದೆ. ಈ ಸಂಬಂಧವಾಗಿ ಟೆಕ್ನಿಕರ್ ಸಬ್-ಕಮಿಟಿಯವರು ಯಾವರೀತಿ ಅಭಿಪ್ರಾಯ ಕೊಡುತ್ತಾರೆ, ಅಡ್‌ವೈಸ್ ಮಾಡುತ್ತಾರೆ, ಅದೇರೀತಿ ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ ಆಗಿಂದಾಗ್ಗೆ ಈ ಸಭೆಯಲ್ಲಿ ಶರಾವತಿ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ ಬಗ್ಗೆ ನಾವು ಮಾಡಿದಂಥ ಟೀಕೆಗಳಿಗೆ, ಎಂದರೆ (1) Unfulfilled specification (2) inadequate supervision, (3) indifference on the part of the people who are in charge of it, ಈಗ ನಡೆದಿರತಕ್ಕಂಥ ಘಟನೆ ಸಮರ್ಥನೆ ದೊರೆಯುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಸಮರ್ಥನೆ ಮಾಡಿಕೊಳ್ಳುವಹಾಗಿಲ್ಲ ಎಂದು ನಾನು ಹೇಳುತ್ತೇನೆ. ನಾನು ಇದೀಗ ಇಂಜನಿಯರುಗಳು ಪರಿಶೀಲನೆಮಾಡಿ ಬಂದು ರಿಪೋರ್ಟು ಬಂದಿದೆ ಎಂದು ಹೇಳಿದೆ. ಆ ರಿಪೋರ್ಟು ಪ್ರಕಾರ ಬ್ರೀಚಿಗೆ ಕಾರಣಗಳೇನು ಎಂದು ಹೇಳಿದ್ದೇನೆ. ನಾವು ಕನ್‌ಸ್ಟ್ರಕ್ಷನ್ನಿಗೆ ಯಾವ ಡಿಸೈನ್ ಕೊಟ್ಟಿದ್ದೆವು, ಯಾವ ಸ್ಪೆಸಿಫಿಕೇಷನ್ ಕೊಟ್ಟಿದ್ದೆವು, ಆ ಸ್ಪೆಸಿಫಿಕೇಷನ್ ಪ್ರಕಾರ ಇದೆ. ಅವರು ಕಟ್ಟಿದ್ದರಲ್ಲಿ ಯಾವ ಧೋಷವೂ ಇಲ್ಲ. ಚಾನಲ್ ಬಾಟಮ್‌ನಿಂದ ನಬ್‌ಸಾಯಿಲ್ ವಾಟರ್ ಬರುತ್ತದೆ. ಅದರ ಫೋರ್ಸ್ ಹೆಚ್ಚಾಗಿ ಈ ಕ್ರಾಕ್ ಬಂದಿದೆ; ಅದರಿಂದ ನೀರು ಬರುತ್ತದೆ. 17ನೇ ತಾರೀಖು ಕ್ರಾಕು ಕಂಡುಬಂದ ತಕ್ಷಣವೇ, ಒಂದು ಮೇಜರಿಂಗ್ ಇನ್‌ಸ್ಟ್ರುಮೆಂಟ್ ತಂದುಹಾಕಿದ್ದೇವೆ. ನೀರು ಪ್ರೆಶರ್ ತಿಳಿದುಕೊಳ್ಳುವ ನಲುವಾಗಿ ಮಳೆಗಾಲ ಬರುವುದಕ್ಕೆ ಮೊದಲು ನೆಲದಕೆಳಗೆ 4.5 ಫೀಟ್ ಪ್ರೆಶರ್ ಇರುತ್ತಿತ್ತು. ಮಳೆ ಬಿದ್ದತಕ್ಷಣ, 4.5 ಫೀಟ್ ಇದ್ದದ್ದು, 9.5 ಫೀಟ್ ಪ್ರೆಶರಿಗೆ ಹೆಚ್ಚಾಗಿದೆ. ಕೆಳಗೆ ಪ್ರೆಶರ್ ಹೆಚ್ಚಾಗಿ ಮೇಲೆ ಯಾವ ಲೋಡು ಇಲ್ಲ.

Sri SANJEEVANATH AIKALA.—Due to this crack, whether the production of power in the Anegondi power station would be delayed ?

Sri VEERENDRA PATIL.—I do not think that it is going to be delayed because we are going to take up the repair work at the end of monsoon and at the most it may take one month's time.

ಈಗ ಆ ಚಾನಲ್‌ನಲ್ಲಿ ನೀರುಬಿಟ್ಟಿಲ್ಲ; ಬಹುಶಃ ಸಂಪೂರ್ಣವಾಗಿ ನೀರುಬಿಟ್ಟರೆ 18 ಪೂಟು ನೀರು ಬರುತ್ತದೆ. ಕೆಳಗಡೆಯಿಂದ ಪ್ರೆಶರ್ ಹೆಚ್ಚಾಗುತ್ತಾ ಇದೆ. ಅದನ್ನು ರೆಸಿಸ್ಟ್ ಮಾಡುವುದಕ್ಕೆ ನೀರಿಲ್ಲ. ಈ ಕಾರಣದಿಂದ ಬ್ರೀಚ್ ಆಗಿದೆ. ಹೋದಸಲ ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗಿತ್ತೋ ಅಷ್ಟು ದೊಡ್ಡ ಪ್ರಮಾಣದಲ್ಲಿ ಈ ಸಲ ಆಗಿಲ್ಲ. ಅದಕ್ಕೆ ನಮ್ಮ ಇಂಜನಿಯರುಗಳು ಅಲ್ಲಿ ಸಾಯಿಲ್ ಸ್ಟೆಬಿಲೈಸ್ ಆಗುತ್ತಾ ಇದೆ ಮುಂದೆ ಈ ರೀತಿ ಆಗುವುದಿಲ್ಲ ಎಂದು ಹೇಳುತ್ತಾ ಇದ್ದಾರೆ. ಚಾನಲ್ ನಲ್ಲಿ ನೀರುಬಿಟ್ಟ ಮೇಲೆ ಈ ರೀತಿ ಆಗುವುದಿಲ್ಲ ಎಂಬ ಆಶೆ ಇದೆ.

ಶ್ರೀ ಎಸ್. ಗೋಪಾಲ ಗೌಡ.—ಈ ರೀತಿ ಬ್ರೀಚ್ ಆಗುವುದಕ್ಕೆ ಸ್ಪೆಸಿಫಿಕೇಷನ್ ಪ್ರಕಾರ ಕೊಟ್ಟ ಸಿಮೆಂಟನ್ನು ಅದಕ್ಕೆ ಹಾಕದೇ ಆ ಸಿಮೆಂಟನ್ನು ಕಂಟ್ರಾಕ್ಟ್‌ದಾರರು ಮತ್ತು ಅಧಿಕಾರಿಗಳು ಸೇರಿ ಮಾರಾಟ ಮಾಡುತ್ತಾ ಬಂದಿರುವುದು ಕಾರಣವಲ್ಲವೆ ?

ಶ್ರೀ ವೀರೇಂದ್ರಪಾಟೀಲ್.—ನಾನು ಇದೀಗ ಸ್ಪಷ್ಟವಾಗಿ ಹೇಳಿದ್ದೇನೆ ಅದು ಯಾವುದೂ ಕಾರಣವಲ್ಲ ಎಂದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇಂಜನಿಯರುಗಳು ಅಂದಾಜು ತಯಾರು ಮಾಡುವ ಕಾಲದಲ್ಲಿ ಇಂತಹ ಓದು ಅನಾಹುತವಾಗಬಹುದು ಎಂದು ಹೇಳಿ ಆಗ ನಿರೀಕ್ಷೆ ಮಾಡಿದ್ದರೆ?

ಶ್ರೀ ವೀರೇಂದ್ರಪಾಟೀಲ್.—ಎಷ್ಟು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿತ್ತೋ ಅಷ್ಟನ್ನು ಮಾಡಿದ್ದಾರೆ. ಅದಕ್ಕೆಲ್ಲಾ ಸರಿಯಾದಂತಹ ಮುಂಜಾಗರೂಕತೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ಎಷ್ಟು ಡೆಪ್ತ್ ಇದೆ ಅದರ ಕೆಳಗೆ ಬೆಡಿಂಗ್ ಹಾಕಿದ್ದೇವೆ ಎಂದು ಹೇಳಿದ್ದೇನೆ. ಮೊದಲನೆಯದಾಗಿ ಇದು ದೊಡ್ಡಪ್ರಮಾಣದ ಕೆಲಸ. ಎಷ್ಟು ಪ್ರಮಾಣದಲ್ಲಿ ಇಮ್ಯಾಜಿನೇಷನ್‌ಗೆ ಅಂಟಿಸಿಪೇಟ್ ಮಾಡುವುದಕ್ಕೆ ಸಾಧ್ಯವಿತ್ತೋ ಅಷ್ಟುಮಾಡಿ ಮುಂಜಾಗರೂಕತೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ. ಪ್ರೆಶರ್ ಹೆಚ್ಚಾಗಿ ಇಲ್ಲದೇ ಇದ್ದುದರಿಂದ ಈ ರೀತಿ ಅನಿರೀಕ್ಷಿತ ಪರಿಸ್ಥಿತಿ ಉಂಟಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಹೇಳಿದ್ದೆಲ್ಲಾ ಕೇಳಿದ್ದು ಆಯಿತು. ಇಲ್ಲ ಎಷ್ಟು ಪ್ರಮಾಣದ ಸಿಮೆಂಟು ಮತ್ತು ಕಬ್ಬಿಣವನ್ನು ಉಪಯೋಗಿಸಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಉಪಯೋಗಿಸದೇ ಅಲ್ಲಿ ಕೆಲಸಮಾಡುವರು ತಿಂದು ಹಾಕಿದ್ದಾರೆಯಲ್ಲವೇ!

ಶ್ರೀ ವೀರೇಂದ್ರ ಪಾಟೀಲ್.—ಅವರೂ ಅದೇ ಕೇಳಿದರು ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾಡಿರತಕ್ಕ ಕೆಲಸದಲ್ಲಿ ಯಾವ ಲೋಪದೋಷವೂ ಇಲ್ಲ. ಸಿಮೆಂಟ್ ಪ್ರಪೋರ್‌ಷನ್ ಸರಿಯಾಗಿ ಉಪಯೋಗಿಸಿದ್ದಾರೆ, ಅದು ಅನಿರೀಕ್ಷಿತವಾಗಿ ಆಗಿದೆ ಎಂದು ಮಾನ್ಯಮಂತ್ರಿಗಳು ಹೇಳಿದರು, ಬರುಕುಬಿಟ್ಟು ಒಡೆದಿರತಕ್ಕ ಬ್ರೀಜ್ ಯಾವರೀತಿ ಆಯಿತು ಎಂಬುದರ ಬಗ್ಗೆ ಒಂದು ರಿಪೋರ್ಟನ್ನು ತರಿಸಿ ಅದನ್ನು ಪರಿಶೀಲನೆ ಮಾಡಿ ನಭೆಯ ಮುಂದೆ ಆ ಇನ್‌ಫರ್ಮೇಷನ್ ಕೊಡುವುದಕ್ಕೆ ಸಾಧ್ಯವೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ಹೊಸದಾಗಿ ಆದುದಲ್ಲ. ಹೋದಸಲವೂ ಆಗಿತ್ತು. ಡಾಕ್ಟರ್ ಕೆ. ಎಲ್. ರಾವ್ ಅವರು ಬಂದಿದ್ದರು; ಆಗ ಅವರು ಎಕ್ಸಾಮಿನ್ ಮಾಡಿದರು, ನಮ್ಮ ಸ್ಪೆಷಲ್ ಚೀಫ್ ಇಂಜನಿಯರು ರಿಪೋರ್ಟ್ ಕಳುಹಿಸಿದ್ದಾರೆ. ಟೆಕ್ನಿಕಲ್ ಸಬ್‌ಕಮಿಟಿ ಮುಂದೆ ಆ ರಿಪೋರ್ಟ್ ಬಂದಿದೆ, ಅವರು ನೋಡಿ ನೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಹೆಚ್. ಆರ್. ಕೇಶವ ಮೂರ್ತಿ.—ಈ ತರಹ ಬಿರುಕು ಬಿಟ್ಟಿರುವುದನ್ನು ಮತ್ತೆ ಮಣ್ಣನ್ನು ಹಾಕಿ ರಿಪೇರಿಮಾಡಿದರೆ ಹಿಂದೆ ಇಟಲಿಯಲ್ಲಿ ಒಂದು ಸಲ ಈ ತರಹ ರಿಪೇರಿಮಾಡಿ ಕೊಚ್ಚಿಹೋಗಿ 4 ಸಾವಿರ ಜನರು ಸತ್ತುಹೋದರು ಅದೇ ರೀತಿ ಇಲ್ಲೂ ಸಾವಿರಾರು ಜನರು ಕೊಚ್ಚಿ ಹೋಗಬಹುದು. ಅದ್ದರಿಂದ ಇಂತಹ ಬೃಹತ್ ಪ್ರಮಾಣದ ಯೋಜನೆಯನ್ನು ಮಾಡುವಾಗ ಅಮೆರಿಕಾ ಅಥವಾ ಇಂಗ್ಲೆಂಡ್‌ನ ಎಕ್ಸ್‌ಪರ್ಟ್‌ಗಳನ್ನು ಕರೆಸಿ ಅವರಿಗೆ ತೋರಿಸಿ ಮುಂದೆ ಇದಕ್ಕೆ ಅವಕಾಶವಿಲ್ಲದ ಹಾಗೆ ಏರ್ಪಾಡುಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.---ಅಂತಹ ಅವಶ್ಯಕತೆ ಏನೂ ಇಲ್ಲ. ನಮ್ಮಲ್ಲೆ ಬೇಕಾದಷ್ಟು ಜನ ಎಕ್ಸ್‌ಪರ್ಟ್ಸ್ ಇದ್ದಾರೆ, ನಾವು ಬೇಕಾದಷ್ಟು ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿದ್ದೇವೆ, ಎಷ್ಟೋಜನ ಹೊರದೇಶದ ಎಕ್ಸ್‌ಪರ್ಟ್ಸ್ ನಮ್ಮದೇಶಕ್ಕೆ ಬಂದವರು ಅದನ್ನೆಲ್ಲಾನೋಡಿ ಒಳ್ಳೆಯ ರೀತಿಯಿಂದ ಪ್ರಶಂಸೆ ಮಾಡಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.---ಇದು ಅನಿರೀಕ್ಷಿತ ಎಂದು ಹೇಳಿದಿರಿ. ನಿರೀಕ್ಷೆಮಾಡಿ ವಿರೋಧ ಪಕ್ಷದ ಸದಸ್ಯರು ಆಗಾಗ್ಗೆ ಶಾಸನ ಸಭೆಯಲ್ಲಿ ಹೇಳುತ್ತಾ ಇದ್ದರಲ್ಲಾ ಎಂದಮೇಲೆ ಅನಿರೀಕ್ಷಿತ ಎಂದು ಹೇಗೆ ಹೇಳುತ್ತೀರಿ ? (ಉತ್ತರ ಇಲ್ಲ).

ಶ್ರೀ ಆರ್. ಎನ್. ಲಕ್ಷ್ಮೀಪತಿ.---63ನೇ ಇನಪಿಯಲ್ಲೂ ಇದೇರೀತಿ ಆಗಿತ್ತು ಎಂದು ಮಾನ್ಯ ಮಂತ್ರಿಗಳು ಹೇಳಿದರು, ಈಗ ಆ ಸ್ಥಳ ಬಿಟ್ಟು ಬೇರೆಸ್ಥಳದಲ್ಲಿ ಆಗಿದೆ. ಈ ರೀತಿ ಆಗದೇ ಇರುವುದಕ್ಕೆ ಮುಂಜಾಗರೂಕತೆಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರಪಾಟೀಲ್.---ಈಗಾಗಲೇ ಚೆಕ್ಕಿಕರ್ ಸರ್ಕಮಿಟಿ ಮುಂದೆ ಈ ಪ್ರಶ್ನೆ ಇದೆ. ಅವರು ವಿಚಾರ ಮಾಡುತ್ತಾರೆ ಮತ್ತು ಈ ರೀತಿ ಆಗಲಾರದಂತೆ ಏನು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಳ್ಳುತ್ತಾರೆ.

QUESTIONS FOR ANSWER ON THE DAY

(but not taken up)

Number of committees constituted by Government for the last three years.

*Q.—90. Sri K. LAKKAPPA (Hebbur).—

Will the Government be pleased to state.—

(*a*) the number of committees constituted by the Government for the last three years;

(*b*) the expenditure incurrd for the payment of T. A. and D. A. to the members of these committe. ees;

(*c*) on what principles Government have selected members for these committees ;

(*d*) whether it is not a fact that the majority of members nominated in these committees are members of the ruling party?

*A.—Sri S. NIJALINGAPPA (Chief Minister).—

(*a*) 400.

(*b*) Rs. 3,34,892--96 nP.

(*c*) (1) Intimate knowledge of the subject matter entrusted to the committees.

(2) Ability of the persons to advise on matters which the committees have to deal.

(3) The special or technical knowledge.

(4) The past activities and the experience gained by them.